# ಭಗವಂತ ಇರಿಸಿದಲ್ಲಿ ಇರಬೇಕು

ಕಲ್ಕತ್ತೆಯಲ್ಲಿನ ಶ್ರೀಮಾತೆಯವರ ವಾಸ್ತವ್ಯವನ್ನು ಬಂಗಾಳಿಯಲ್ಲಿ 'ಮಾಯೇರ್ ಬಾಡಿ' (ತಾಯಿ ಮನೆ) ಎಂದು ಕರೆಯುತ್ತಾರೆ. ಅಲ್ಲಿಂದಲೇ ರಾಮಕೃಷ್ಣ ಮಹಾಸಂಘದ ಬಂಗಾಳಿ ಪತ್ರಿಕೆ 'ಉದ್ಬೋಧನ' ಪ್ರಕಟವಾಗುವುದರಿಂದ ಆ ಮನೆಯನ್ನು ಇಂದಿಗೂ ಉದ್ಬೋಧನ್ ಎಂದೂ ಕರೆಯುತ್ತಾರೆ.

'ಉದ್ಬೋಧನ'ದ ಪೂಜಾ ಗೃಹದಲ್ಲಿ ಪೂಜೆ ಮಾಡುತ್ತಿದ್ದ ಸ್ವಾಮಿ ವಿಶ್ವೇಶ್ವರಾನಂದರು ಒಮ್ಮೆ ಕಾಯಿಲೆ ಬಿದ್ದುದರಿಂದ, ಸ್ವಾಮಿ ವಾಸುದೇವಾನಂದರನ್ನು ಬೇಲೂರು ಮಠದಿಂದ ಆ ಕಾರ್ಯಕ್ಕೆ ಕಳುಹಿಸಲಾಯಿತು. ಒಂದು ದಿನ ಪೂಜಾ ಕೋಣೆಯಲ್ಲಿ ಅವರು ಆರತಿಗೆ ಮುಂಚೆ ಧ್ಯಾನ ಮಾಡುತ್ತಾ ಕುಳಿತಿದ್ದರು. (ಮಹಡಿಯ ಮೇಲಿದ್ದ ಅದೇ ಕೋಣೆಯಲ್ಲಿಯೇ ಶ್ರೀಮಾತೆ ಶಾರದಾದೇವಿಯವರು ಸಾಮಾನ್ಯವಾಗಿ ವಾಸಿಸುತ್ತಿದ್ದರು.) ಕೆಳಗಿನ ಪಡಸಾಲೆಯಲ್ಲಿ ಆಗ ನಡೆಯುತ್ತಿದ್ದ ಮೊದಲನೆ ಮಹಾಯುದ್ಧದ ಬಗ್ಗೆ ಬಿರುಸಾದ ಚರ್ಚೆ ನಡೆಯುತ್ತಿತ್ತು. ಶ್ರೀಮಾತೆಯವರ ತಮ್ಮನ ಮಗಳಾದ ರಾಧು ವಿಪರೀತ ಚಡಪಡಿಸುತ್ತ ಅವರಿಗೆ ತೊಂದರೆ ಕೊಡುತ್ತಲೇ ಇದ್ದಳು. ಒಟ್ಟಿನಲ್ಲಿ ಬೇಲೂರು ಮಠದ ಪ್ರಶಾಂತ ವಾತಾವರಣ ಅಲ್ಲಿರಲಿಲ್ಲ. ತಮ್ಮ ಗುರು ಎಂದು ಭಾವಿಸಿದ್ದ ಶ್ರೀಮಾತೆಯವರು ಅಷ್ಟು ಹತ್ತಿರದಲ್ಲೇ ಇದ್ದರೂ ವಾಸುದೇವಾನಂದರಿಗೆ ಅನಿಸಿತು: 'ದೇವರೆ! ನಾನೆಲ್ಲಿಗೆ ಬಂದೆ? ಇಲ್ಲಿ ಎಷ್ಟೊಂದು ಗಲಾಟೆ!' ಎಂದು. ಅದೇ ಹೊತ್ತಿಗೆ ರಾಧು ಶ್ರೀಮಾತೆಯವರನ್ನು 'ಅತ್ತೆ, ನಾವು ಜಯರಾಮಬಟಿಗೆ ಹೋಗೋಣ' ಎಂದು ಪೀಡಿಸಲಾರಂಭಿಸಿದಳು. ಶ್ರೀಮಾತೆಯವರು ಅವಳನ್ನು ಗದರಿಸುತ್ತಾ, 'ಸುಮ್ನಿರು, ನೀನು ಕೇಳಿದೆ ಎಂದು ಈಗ ಅಲ್ಲಿಗೆ ಹೋಗಲಾಗುವುದೇ? ಭಗವಂತ ಯಾವ ಕಾಲದಲ್ಲಿ ನಮ್ಮನ್ನು ಎಲ್ಲಿ ಇರಿಸುತ್ತಾನೆಯೋ, ಅಲ್ಲಿಯೇ ಇರಬೇಕು.'



ಸ್ವಾಮಿ ವಾಸುದೇವಾನಂದರಿಗೆ ತಾಯಿಯವರ ಈ ಮಾತುಗಳು ತಲೆಗೆ ಬಡಿದಂತಾಯಿತು. ಈಗ ಅವರಿಗೆ ಹೊಳೆಯಿತು, 'ಶ್ರೀ ಮಾತೆಯವರು ಗದರಿಸಿದ್ದು ರಾಧುವನ್ನಲ್ಲಾ, ತಮ್ಮನ್ನೇ!' ಎಂದು. ಪ್ರತಿಯೊಬ್ಬರೂ ಎಲ್ಲಾ ಪರಿಸ್ಥಿತಿ(ಹಿತ, ಅಹಿತ)ಗಳಲ್ಲೂ ಭಗವಂತನಿಗೆ ಶರಣಾಗಿ ಅವುಗಳನ್ನು ಸಹಿಸಬೇಕು. ಶ್ರೀರಾಮಕೃಷ್ಣರೇ ಹೇಳಿಲ್ಲವೇ, 'ಎಲ್ಲಾ ಅವಸ್ಥೆಗಳನ್ನೂ ದಾಟಿ ಬಂದ ನಂತರವೇ ಮುಕ್ತಿ ದೊರಕುವುದು'ಎಂದು.

ಸ್ವಾಮಿಗಳಿಗೆ ತಾವು ಯಾರನ್ನು ಗುರುವೆಂದೆಣಿಸಿದ್ದರೋ ಅಂತಹ ಶ್ರೀಮಾತೆಯವರೇ ಎದುರು ಇರುವಾಗ ತಾನು ಬೇರೆಕಡೆ ಹೋಗಬಯಸಿದೆನಲ್ಲಾ ಎಂದು ಭಾವಿಸಿ ತೀವ್ರ ಪಶ್ಚಾತ್ತಾಪವಾಯಿತು. ಆರತಿ ಮಾಡುವ ಮುಂಚೆ ಶ್ರೀಮಾತೆಯವರಿಗೆ ಸಾಷ್ಟಾಂಗ ಪ್ರಣಾಮ ಮಾಡಿ ಪ್ರಾರ್ಥಿಸಿದರು: 'ಅಮ್ಮಾ, ಎಲ್ಲಾ ಸಂದರ್ಭಗಳಲ್ಲಿಯೂ ನಿಮ್ಮ ಪಾದಕಮಲಗಳಲ್ಲಿ ನನಗೆ ನಿಶ್ಚಲವಾದ ಭಕ್ತಿ ಇರುವಂತೆ ಅನುಗ್ರಹಿಸಿ. ನಿಮ್ಮ ಪಾದಕಮಲಗಳನ್ನು ನಾನು ಮರೆಯದಂತಾಗಲಿ.' ಶ್ರೀಮಾತೆಯವರು ಆ ಸ್ವಾಮಿಗಳನ್ನು ತುಂಬು ಹೃದಯದಿಂದ ಆಶೀರ್ವದಿಸಿದರು.

ಸಂಗ್ರಹ:—ಎನ್. ಗೋಪೀನಾಥ್.

ಶಂಬುನಾಥನೆಂಬ ಎಂಟು ವರ್ಷದ ಬಾಲಕ ಒಂದು ದಿನ ತನ್ನ ಸಂಬಂಧಿಕರೊಡನೆ ಶ್ರೀಮಾತೆಯವರೆಡೆಗೆ ಬಂದು 'ತಾಯಿ, ನಾನು ಸಾಧುವಾಗುತ್ತೇನೆ, ಬೇಲೂರು ಮಠದಲ್ಲಿ ಇರುತ್ತೇನೆ. ನೀವು ಆ ಸ್ವಾಮಿಗಳಿಗೆ ಹೇಳಿದರೆ ಅವರು ನನ್ನನ್ನು ಸೇರಿಸಿಕೊಳ್ಳುವರು' ಎಂದು ಹೇಳಿದನು. ಆ ಸರಳ ಬಾಲಕನ ನುಡಿಯನ್ನು ಕೇಳಿ ಶ್ರೀಮಾತೆಯವರು ನಗುನಗುತ್ತ ಕೇಳಿದರು ' ಈ ಮಾತನ್ನು ನಿನಗೆ ಯಾರು ಹೇಳಿಕೊಟ್ಟರು ಮಗು?' ಎಂದು. ಅವನೆಂದ, "ಯಾರೂ ಕಲಿಸಲಿಲ್ಲ. ಅಮ್ಮನಿಗೆ ಈ ಮಾತನ್ನು ಹೇಳಿದೆ, ಅವಳಂದಳು : "ನನ್ನನ್ನು ಬಿಟ್ಟು ನೀನು ಎಲ್ಲಿಗೂ ಹೋಗಬೇಡ, ಹೋದರೆ ವಿಷ ಕುಡಿದು ಸಾಯುತ್ತೇನೆ " ಎಂದು. ನಾನೆಂದೆ, "ಏಕೆ? ನಿನಗೆ ಬೇರೆ ಮಕ್ಕಳಿದ್ದಾರೆ. ನಾನು ಬೇಲೂರು ಮಠಕ್ಕೆ ಹೋಗಿ ಸಾಧುವಾಗುತ್ತೇನೆ. ನೀನು ಸಾಧುವಾಗುವುದಕ್ಕೆ ಬಿಡದಿದ್ದರೆ ನಾನು ಸತ್ತುಹೋಗುತ್ತೇನೆ, ಬದುಕುವುದಿಲ್ಲ"ಎಂದು.' ಶ್ರೀಮಾತೆಯವರು ಬಾಲಕನ ಗಲ್ಲವನ್ನು ಹಿಡಿದು ಆದರಿಸಿ ಎದೆಯನ್ನು ಸ್ಪರ್ಶಿಸಿ ಸ್ವಲ್ಪ ಜಪಮಾಡಿ ಅನಂತರ ತಮ್ಮ ಕೈಯಿಂದಲೆ ಅವನಿಗೆ ತಿಂಡಿ ತಿನಿಸಿದರು. ಹೆತ್ತ ತಾಯಿಗೆ ದುಃಖವನ್ನಿತ್ತು ಆ ಎಳೆ ವಯಸ್ಸಿನಲ್ಲಿ ಬಾಲಕ ಸಂನ್ಯಾಸಿಯಾಗುವುದು ಯೋಗೀನ್-ಮಾಳಿಗೂ ಇಷ್ಟವಿರಲಿಲ್ಲ. 'ತಾಯಿ, ಹುಡುಗನನ್ನು ಅವನ ತಾಯಿಯೆಡೆಗೇ ಕಳಿಸಿಬಿಡಿ. ಇನ್ನೂ ಹಾಲ ಹಸುಳೆ' ಎಂದು ಮಮತೆಯಿಂದ ನುಡಿದಳು. ಶ್ರೀಮಾತೆಯವರೆಂದರು, 'ಯೋಗೀನ್, ಅವನಿಗೆ ಇದೇ ಕೊನೆ ಜನ್ಮ. ಅಲ್ಪ ಆಯುಸ್ಸು. ಶುಭ ಇಚ್ಛೆ ಈಗಲೇ ನೆರವೇರಲಿ' ಎಂದು.

ಅವನ ಸಂಬಂಧಿಕರು ಅವನನ್ನು ಬೇಲೂರು ಮಠಕ್ಕೆ ಕರೆದೊಯ್ದರು. ಅಲ್ಲಿ ಆ ಹುಡುಗ ಸ್ವಾಮಿ ಬ್ರಹ್ಮಾನಂದ, ಪ್ರೇಮಾನಂದ ಮುಂತಾದವರಿಗೆಲ್ಲ ಪ್ರಣಾಮ ಮಾಡಿ ಅವರ ಆಶೀರ್ವಾದವನ್ನು ಬೇಡಿದನು. ಏನು ಮಾಡಿದರೂ ಮನೆಗೆ ಹಿಂದಿರುಗಲು ಒಪ್ಪಲೇ ಇಲ್ಲ. ಮಠದಲ್ಲಿಯೆ ಇದ್ದು ಸಾಧುಗಳ ಸೇವೆ ಮಾಡುತ್ತೇನೆಂದ. ಸ್ವಾಮಿ ಪ್ರೇಮಾನಂದರು ಅವನಿಗೆ ಸರಿಯಾಗಿ ಬುದ್ಧಿಹೇಳಿ ಅವನ ತಾಯಿಯೆಡೆಗೆ ಕಳಿಸಿದರು. ಎರಡು-ಮೂರು ವಾರಗಳ ನಂತರ ಸುದ್ದಿ ಬಂತು ಆ ಬಾಲಕ ದೇಹತ್ಯಾಗ ಮಾಡಿದನೆಂದು.